ಎಂ.ಎಸ್.ಆರ್.ಲೇನ್, ರುಕ್ಮಾಜಿ ಲೇನ್, ಹೂವಾಡಿಗರ ಗಲ್ಲಿ, ಓಬಯ್ಯ ಗಲ್ಲಿ, ಸುಬ್ರಮಣ್ಯ ಗಲ್ಲಿ, ಕೊಟ್ಟಿಗೆ ವೀರಭದ್ರಪ್ಪ ಗಲ್ಲಿ, 16ನೇ ಕ್ರಾಸ್, ಕಬ್ಬನ್ ಪೇಟೆ, 23ನೇ ಕ್ರಾಸ್ ಸಂಜೀವಪ್ಪ ನಾಯಕ ಗಲ್ಲಿ, 18ನೇ ಕ್ರಾಸ್ ಕಬ್ಬನ್ ಪೇಟೆ ಎಂ.ಎಂ.ಲೇನ್, ಮುಂತಾದ ಪ್ರದೇಶಗಳಲ್ಲಿ ಹಾಲಿ ಇರುವ ಹಳೆಯ 6 ಅಂಗುಲ ವ್ಯಾಸದ ಕೊಳವೆಗಳನ್ನು ತೆಗೆದು ಹೊಸ 9 ಅಂಗುಲ ವ್ಯಾಸದ ಕೊಳವೆಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ.

ಬೆಂಗಳೂರು ಅಭಿವೃದ್ಧಿಗಾಗಿ ರಚಿಸಿರುವ ಕಾರ್ಯಾಚರಣೆ ಪಡೆಯ ಕಾರ್ಯಕ್ರಮಗಳು

1834 (2559) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ಅಭಿವೃದ್ಧಿಗಾಗಿ ಕಾರ್ಯಾಚರಣೆ ಪಡೆಯನ್ನು ಎಂದು ರಚಿಸಲಾಯಿತೆ;

(ಆ) ಈ ಕಾರ್ಯಾಚರಣೆ ಪಡೆಯಲ್ಲಿರುವ ಹೆಸರು ವಿವರಗಳೇನು;

(ಇ) ಈ ಕಾರ್ಯಾಚರಣೆ ಪಡೆಯ ರಚನೆ ಯಾದಾಗಿನಿಂದ ಎಷ್ಟು ಭಾರಿ ಸಭೆ ಸೇರಿ ಹಾಗೂ ನಗರದ ಯಾವ ಯಾವ ಸ್ಥಳಗಳಿಗೆ ಭೇಟಿ ನೀಡಿದೆ;

(ಈ) ಈ ಕಾರ್ಯಾಚರಣೆ ಪಡೆಗೆ ನೀಡಲಾಗಿರುವ ಅಧಿಕಾರಗಳೇನು;

(ಉ) ಈ ಕಾರ್ಯಾಚರಣೆ ಪಡೆಯು ಬೆಂಗಳೂರು ನಗರದ ಅಭಿವೃದ್ಧಿಗಾಗಿ ಟೈಂಬೌಂಡ್ ಕಾರ್ಯಕ್ರಮಗಳನ್ನು ರೂಪಿಸಿದೆಯೇ;

(ಊ) ರೂಪಿಸಿದ್ದಲ್ಲಿ ಆ ಕಾರ್ಯಕ್ರಮಗಳ ವಿವರಗಳೇನು?

ಶೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

(ಅ) 26-11-1999.

(ಆ) ಬೆಂಗಳೂರು ಅಜೆಂಡಾ ಟಾಸ್ಕ್‌ಫೋರ್ಸ್‌ನಲ್ಲಿ ಈ ಕೆಳಕಂಡ ಅಧ್ಯಕ್ಷರು ಹಾಗೂ ಸದಸ್ಯರಿರುತ್ತಾರೆ.

1. ಶ್ರೀ. ನಂದನ್ ನಿಲೇಖನಿ	-	ಅಧ್ಯಕ್ಷರು.
2. ಶ್ರೀ. ನರೇಶ್ ಮಲ್ಹೋತ್ರ	-	ಸದಸ್ಯರು.
3. ಡಾ: ಸಾಮ್ಯುಯಲ್ ಪಾಲ್	-	”
4. ಡಾ: ರಾಜರಾಮಣ್ಣ	-	”
5. ಡಾ: ಹೆಚ್. ನರಸಿಂಹಯ್ಯ	-	”
6. ಶ್ರೀ. ನರೇಶ್ ವೆಂಕಟರಾಮನ್	-	”

7. ಶ್ರೀ. ವಿ. ರವಿಚಂದರ್ - "
8. ಶ್ರೀ. ಎಂ.ಕೆ. ರಾಮಚಂದ್ರ - "
9. ಶ್ರೀ. ಕೆ. ಕೃಷ್ಣಕುಮಾರ್ - "
10. ಶ್ರೀ. ಕೆ. ಜೈರಾಜ್ - "
11. ಶ್ರೀ. ಟಿ. ಜಕಾರಿಯಾ - "
12. ಶ್ರೀ. ನಿರಂಜನ್ ಆಳ್ವ - "
13. ಶ್ರೀ. ರಮೇಶ್ ರಾಮನಾಥನ್ - "
14. ಶ್ರಿಮತಿ. ಕಲ್ಪನಾಕರ್ - "

(ಇ) ಎರಡು ಬಾರಿ ಸಭೆ ಸೇರಿ ಬೆಂಗಳೂರಿನ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿದೆ. ಯಾವುದೇ ಸ್ಥಳಕ್ಕೆ ಸಮಿತಿ ಭೇಟಿ ನೀಡಿಲ್ಲ.

(ಈ) ನಾಗರೀಕ ಸೌಲಭ್ಯಗಳನ್ನು ಉತ್ತಮಗೊಳಿಸುವುದು. ಅಭಿವೃದ್ಧಿ ಕಾರ್ಯಗಳಿಗಾಗಿ ಆದಾಯದ ಮೂಲಗಳನ್ನು ಸೃಷ್ಟಿಸುವುದು. ಸಾರ್ವಜನಿಕ ಸಂಸ್ಥೆಗಳನ್ನು ಹಾಗೂ ಕೈಗಾರಿಕೋದ್ಯಮಗಳನ್ನು ತೊಡಗಿಸಿಕೊಂಡು ಯೋಜನಾ ಬದ್ಧವಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ನಾಗರೀಕರ ಜೀವನ ಮಟ್ಟವನ್ನು ಸುಧಾರಿಸುವುದು, ಇತ್ಯಾದಿ.

(ಉ) ಹೌದು.

(ಊ) ಪ್ರಶ್ನೆ (ಈ)ಗೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ರೂಪಿಸಿರುವ ಕಾರ್ಯಕ್ರಗಳನ್ನು ಕಾರ್ಯಗತಗೊಳಿಸಲು 7 (ಇಲಾಖೆಗಳ) ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧ ಪಟ್ಟಂತೆ ಅಲ್ಪಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ಹಾಕಿಕೊಂಡು ಕಾರ್ಯಪ್ರವೃತ್ತರಾಗಿದ್ದಾರೆ.

ಬೆಂಗಳೂರು ನಗರದಲ್ಲಿ ಒಳಚರಂಡಿ ಶುದ್ಧೀಕರಣ ಕಾರ್ಯಗಾರದ ಬಗ್ಗೆ

1835 (2561) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರಕ್ಕೆ ಒಳಚರಂಡಿ ಶುದ್ಧೀಕರಣ ಮಾಡುವ ಎರಡು ಕಾರ್ಯಗಾರಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಪೈಕಿ ಕೋರಮಂಗಲ: ಚಲ್ಲಘಟ್ಟ ಕಣಿವೆಯಲ್ಲಿ ಇರುವ ಒಳಚರಂಡಿ ಕಾರ್ಯಗಾರ ಸಾಮರ್ಥ್ಯದ ಸಾಲದೆ ಒಳಚರಂಡಿ ನೀರನ್ನು ನೇರವಾಗಿ ಬಳಂದೂರು ಕೆರೆಗೆ ಬಿಡುತ್ತಿರುವುದರಿಂದ ಸದರಿ ಕೆರೆ ನೀರು ಕುಡಿಯಲು ಬಟ್ಟೆ ಒಗೆಯಲು, ಮೀನು ಸಾಗಣೆ ಮಾಡಲು ಮತ್ತು ವ್ಯವಸಾಯಕ್ಕೆ ಉಪಯೋಗಿಸಲು ಅಸಮರ್ಥವಾಗಿದ್ದು ಸೊಳ್ಳೆಗಳ ತಯಾರಿಕಾ ಕೇಂದ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;